International Journal of Kannada Research
www.kannadajournal.com

**ISSN: 2454–5813**
IJKR 2018; 4(4): 66-68
© 2018 IJKR
www.kannadajournal.com
Received: 11-08-2018
Accepted: 12-09-2018

**ಲಕ್ಷ್ಮೀಬಾಯಿ ಅಂಬಾದಾಸ**
ಸಂಶೋಧನಾ ವಿದ್ಯಾರ್ಥಿನಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ಲಕ್ಷ್ಮೀಬಾಯಿ ಅಂಬಾದಾಸ**
ಸಂಶೋಧನಾ ವಿದ್ಯಾರ್ಥಿನಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಆಧುನಿಕ ಕನ್ನಡ ನಾಟಕಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್

**ಲಕ್ಷ್ಮೀಬಾಯಿ ಅಂಬಾದಾಸ**

**ಪ್ರಸ್ತಾವನೆ**

ಆಧುನಿಕ ಭಾರತದ 21ನೇ ಶತಮಾನವನ್ನು ಡಾ. ಅಂಬೇಡ್ಕರ್ ಯುಗವೆಂದು ಕರೆಲಾಗಿದೆ. ಡಾ.ಅಂಬೇಡ್ಕರರು ಈ ದೇಶದ ಅಪೂರ್ವ ಸಾಧಕ, ಪ್ರಗತಿಪರ ಚಿಂತಕ, ಸಮಾಜ ಸುಧಾರಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ನಾಯಕ ಹಾಗೂ ಭಾರತ ದೇಶದ ಸಂವಿಧಾನದ ಶಿಲ್ಪಿಯಾಗಿ ಆಧುನಿಕ ಭಾರತದ ನಿರ್ಮಾಪಕಗಳಲ್ಲಿ ಒಬ್ಬರಾಗಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್‌ರವರ 125ನೇ ಜಯಂತ್ಯೋತ್ಸವದ ಆ ದಿನವನ್ನು ವಿಶ್ವದಾದ್ಯಂತ 'ತಿಂಡಿಟಜ ಇಟಿಂತಿಟಜಜಂಜ ಜಚಿಥಿ' ದಿನವನ್ನಾಗಿ ಆಚರಿಸಲಾಗಿದೆ. ಜಗತ್ತಿನಲ್ಲಿಯೇ ಅತಿಹೆಚ್ಚು ಅಧ್ಯಯನ ಮಾಡಿದ ಅಪರೂಪ ಚಿಂತಕರಾಗಿ, ಶೋಷಿತ ಸಮೂದಾಯದ ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಬಾಳಿ ಬೆಳಗಿದ ಡಾ. ಬಿ.ಆರ್. ಅಂಬೇಡ್ಕರ್ ಅವರದು ಬಹುಮುಖ ವರ್ಣನಾತೀತ ವ್ಯಕ್ತಿತ್ವ ಅವರದು. ಭಾರತ ದೇಶಕ್ಕೆ ಅವರ ಸೇವೆ ಅವಿಸ್ಮರಣೀಯವಾದದು.

ಡಾ.ಅಂಬೇಡ್ಕರ್ ಅವರು ಕತ್ತಲೆ ಸ್ಪೃಶ್ಯರಾಗಿ, ದಲಿತರಾಗಿ ಬದುಕುತಿದ್ದವರಿಗೆ ಆಶಾಕಿರಣವಾಗಿ ಬಂದವರು. ಬುದ್ಧ, ವಸವಣ್ಣನವರ ಆದರ್ಶ, ತತ್ವ, ಸಿದ್ಧಾಂತಗಳನ್ನು ಪ್ರತಿಪಾದಿಸಿ, ಹಿಂದೂ ಧರ್ಮದ ಮೂಢನಂಬಿಕೆ ಅಮಾನವೀಯತೆ ತೊರೆದು ಬೌದ್ಧ ಧಮ್ಮವನ್ನು ಅಪ್ಪಿಕೊಂಡವರು. ಮಹಾತ್ಮ ಜ್ಯೋತಿಬಾ ಫುಲೆ ಅವರನ್ನು ಶೈಕ್ಷಣಿಕ ಗುರುವೆಂದು ಒಪ್ಪಿಕೊಂಡವರು. ಕಬೀರರನ್ನು ಆಧ್ಯಾತ್ಮಿಕ ಗುರುವೆಂದು ಒಪ್ಪಿಕೊಂಡವರು. ನಡೆ–ನುಡಿ ಪ್ರಾಮಾಣಿಕತೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬುದ್ಧ–ಬಸವ, ಕಬೀರ, ಫುಲೆ, ನಾಲ್ವಡಿ ಕೃಷ್ಣರಾಜ ಒಡೆಯರ್, ಪೆರಿಯಾರ್, ಸೈಯಾಜಿರಾವ್ ಗಾಯಾಕವಾಡ, ಶಾಹೂ ಮಹಾರಾಜರಂತಹ ಅನೇಕರ ಪ್ರಭಾವ– ಪ್ರೇರಣೆ ಪಡೆದುಕೊಂಡು ಭಾರತದಲ್ಲಿನ ವರ್ಣಾಶ್ರಮ ಪದ್ಧತಿಯನ್ನು ತಿರಸ್ಕರಿಸಿ ಸಮಸಮಾಜ ನಿರ್ಮಾಣದತ್ತ ಸಾಗಿದವರು. ಇಂದಿನ ಆಧುನಿಕ ಯುಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರೇರಣೆ ಪ್ರಭಾವಗಳಿಂದಾಗಿ ದುಡಿಯುವ ವರ್ಗಗಳ, ರೈತರ, ಕಾರ್ಮಿಕರ, ಮಹಿಳೆಯರ, ದಲಿತರ ನೊವಿನ ಧ್ವನಿಯಾಗಿ ಪ್ರತಿಧ್ವನಿಸಿ ಸಾಮಾಜಿಕ ನ್ಯಾಯ ಒದಗಿಸಿಕೊಟ್ಟವರು ಇಂದಿನ ಆಧುನಿಕ ಯುಗದಲ್ಲಿ ಡಾ.ಅಂಬೇಡ್ಕರ್‌ರ ಪ್ರಭಾವದಿಂದಾಗಿ ಮಹಾರಾಷ್ಟ್ರದ ದಲಿತ ಪ್ಯಾಂಥರ್, ಆಫ್ರಿಕಾದ ಕಪ್ಪುಸಾಹಿತ್ಯದಿಂದ ಕನ್ನಡಕ್ಕೆ ಡಾ. ಬಿ.ಆರ್.ಅಂಬೇಡ್ಕರ್‌ರು ಪರಿಚಯವಾದದ್ದು ಸ್ಮರಿಸಿಕೊಳ್ಳಬಹುದು. ಕರ್ನಾಟಕದಲ್ಲಿ 70ರ ದಶಕದ ಸಂದರ್ಭದಲ್ಲಿ ಬಿ.ಕೃಷ್ಣಪ್ಪ ಅವರು ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟು ಹಾಕಿದರು. ಸಂಘಟನೆಯಿಂದ ದಲಿತರ ಅಶೋತ್ತರಗಳಿಗೆ ಸ್ಪಂದಿಸಿದರು. ಕನ್ನಡ, ಮರಾಠಿ, ಇಂಗ್ಲೀಷ್, ಹಿಂದಿ ಅನುವಾದ ಸಾಹಿತ್ಯದ ಮೂಲಕ ಕನ್ನಡದಲ್ಲಿ ಡಾ.ಅಂಬೇಡ್ಕರ್ ಚಿರಾಪರಿಚಿತರಾದರು. ಡಾ. ಅಂಬೇಡ್ಕರ್ ಅವರು ಬೆಳಗಾವಿ, ಧಾರವಾಡ, ವಾಡಿ ಈ ಮುಂತಾದ ಸ್ಥಳಗಳಿಗೆ ಬಂದು ಹೋದದ್ದು ಅವಿಸ್ಮರಣೀಯ ಸಂಗತಿ. ಇವರ ಸಂಘಟನಾತ್ಮಕ ಚಿಂತನಶೀಲತೆಯ ಪ್ರಭಾವದಿಂದಾಗಿ ಕನ್ನಡ ಸಾಹಿತ್ಯವಲಯ ಶ್ರೀಮಂತಗೊಂಡದೆ. ಇದಲ್ಲದೆ ಡಾ.ಅಂಬೇಡ್ಕರ್ ಅವರನ್ನು ಕುರಿತು ಅನೇಕ ಸಂಘ, ಸಂಸ್ಥೆಗಳು ಹುಟ್ಟಿ ಪ್ರಗತಿಪರ ವೈಚಾರಿಕ ನೆಲೆಯಲ್ಲಿ ಚಳುವಳಿಗಳು ಮುನ್ನುಗ್ಗುತ್ತಿವೆ.

ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಈ ಪರಂಪರೆಯಲ್ಲಿ ದಲಿತ ಸಾಹಿತ್ಯ ವಿಶಿಷ್ಟವಾದುದು. ಡಾ.ಅಂಬೇಡ್ಕರ್ ಬರಹ ಮತ್ತು ಭಾಷಣಗಳನ್ನಾಧರಿಸಿ ಹೆಚ್ಚೆಚ್ಚು ಅಧ್ಯಯನ ನಡೆದಿವೆ. ಕಾವ್ಯ, ಕತೆ, ಕಾದಂಬರಿ, ನಾಟಕ, ವಿಚಾರವಿಮರ್ಶೆ, ಸಂಶೋಧನೆ ಕ್ಷೇತ್ರ ಸಮೃದ್ಧಿಗೊಂಡಿದೆ. ಅದರಲ್ಲಿ ನಾಟಕ ಸಾಹಿತ್ಯ ಅತ್ಯಂತ ಪ್ರಮುಖವಾದುದು. ನಾಟಕವು ದೃಶ್ಯ–ಶ್ರವ್ಯ ಎರಡು ಮಾಧ್ಯಮದಿಂದಾಗಿ ಜನಸಾಮಾನ್ಯರನ್ನು ನೇರವಾಗಿ ಸಂವಹನಗೊಳಿಸಿದೆ. ಡಾ.ಅಂಬೇಡ್ಕರ್ ಅವರು ಈ ದೇಶದ ಪ್ರತಿಯೊಬ್ಬ ಜಾತಿ, ಜನಾಂಗ, ಧರ್ಮ, ಸ್ವತಂತ್ರವಾಗಿ ಬದುಕಲು ಸಂವಿಧಾನದ ಮೂಲಕ ಹಕ್ಕುಗಳನ್ನು ಕಲ್ಪಿಸಿದ್ದಾರೆ. ಬುದ್ಧ, ಬಸವ, ಕನಕ, ಫುಲೆಯಂತಹ ಮಹಾತ್ಮರು ಸಮಾನತೆಗಾಗಿ ನಿರಂತರ ಹೋರಾಟ ಮಾಡಿದರು. ಆದರೆ ಸಮಾನತೆ, ಸ್ವಾತಂತ್ರ್ಯ, ಸಹೋದರತೆಯನ್ನು ಕಾನೂನು ಬದ್ಧವಾಗಿ ನೀಡಿದವರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಎಂಬುದು ಯಾರು ಅಲ್ಲಗಳೆಯಲಾರರು. ವರ್ಗದ ಮಹಿಳೆಯರು ಸಾಮಾಜಿಕ ನೆಲೆಯಲ್ಲಿ ಸಮಾನರು ಎಂದು ಸಂವಿಧಾನ ಪ್ರತಿಪಾದಿಸುತ್ತದೆ.

ಡಾ.ಅಂಬೇಡ್ಕರ್ ಅವರು ಕಲ್ಪಿಸಿಕೊಟ್ಟ ಮೀಸಲಾತಿಯ ಹೊಸ ದೃಷ್ಠಿಕೋನ ಹೊಂದಿದ್ದೆ.

ಡಾ.ಅಂಬೇಡ್ಕರ್ ಅವರ ಚಿಂತನಾಧಾರಿತ ಸಾಹಿತ್ಯ ಭಾರತದ ಎಲ್ಲ ಭಾಷೆಗಳಲ್ಲಿ ಬಂದಿರುವುದಲ್ಲದೆ, ಸಂಶೋಧನಾಧ್ಯನಗಳು ವಿಫಲವಾಗಿ ನಡೆದಿವೆ. ಅವರ ವ್ಯಕ್ತಿತ್ವ ಸಾಧನೆ ಕುರಿತು ಅಪೂರ್ವವಾದ ಅಧ್ಯಯನ ಮಹತ್ವ ಪಡೆದಿದೆ. ಈ ನಿಟ್ಟಿನಲ್ಲಿ ನಾಟಕ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಅವರ ಚಿಂತನೆ ಕುರಿತು ಸಂಶೋಧನೆ ಕೈಗೊಳ್ಳುವುದು ಗಮನಾರ್ಹವಾದುದು. ಡಾ.ಬಿ.ಆರ್ ಅಂಬೇಡ್ಕರ್ ಅವರು ಬಹುಮುಖ ಪ್ರತಿಭೆಯ ವ್ಯಕ್ತಿತ್ವ ಅವರ ಜೀವನ ಚರಿತ್ರೆ, ವ್ಯಕ್ತಿ ಪರಿಚಯ, ವಿಚಾರ ಸಾಹಿತ್ಯ, ವೈಚಾರಿಕ, ಲೇಖನಗಳು, ಕತೆ ಮತ್ತು ಕಾದಂಬರಿ ಕುರಿತು ಆಧುನಿಕವಾಗಿ ಹೀಗೆ ಹಲವು ಪ್ರಕಾರದಲ್ಲಿ ಡಾ.ಅಂಬೇಡ್ಕರ್ ಕುರಿತಾಗಿ ಸಾಹಿತ್ಯ ರಚನೆಯಾಗಿದೆ. ಹೀಗಾಗಿ ಆಧುನಿಕ ನಾಟಕಗಳಲ್ಲಿ ಡಾ.ಅಂಬೇಡ್ಕರ್ ಅವರ ವ್ಯಕ್ತಿತ್ವ, ಸಂದೇಶ, ಅವರ ವಿಚಾರ, ವೈಚಾರಿಕ ನಿಲುವು ಸಂಶೋಧನೆ ಮಾಡಲು ಡಾ.ಅಂಬೇಡ್ಕರ್ ಕುರಿತಾದ ನಾಟಕ ಸಾಹಿತ್ಯ ಕುರಿತು ಅಧ್ಯಯನ ಮಾಡಲಾಗುತ್ತಿದೆ.

ಭಾರತ ದೇಶದ ಚರಿತ್ರೆಯಲ್ಲಿ ಹಾಗೂ ಸಾಹಿತ್ಯದಲ್ಲಿ ಡಾ. ಅಂಬೇಡ್ಕರ್ ಅವರಿಗೆ ಪ್ರಮುಖ ಸ್ಥಾನ ಪ್ರಾಪ್ತವಾಗಿದೆ. ಭಾರತದ ಸಂವಿಧಾನದ ಮೂಲ ಉದ್ದೇಶ ಎಲ್ಲರಿಗೂ ಸಮಾನವಾದ ಅವಕಾಶ ಕಲ್ಪಿಸಿದೆ. ಅವರ ಬದುಕು ಬರಹ ಡಾ.ಅಂಬೇಡ್ಕರ್‌ರವರು ಸಾಮಾಜಿಕ, ರಾಜಕೀಯ, ಹಾಗೂ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಇತಿಹಾಸದ ಪ್ರತಿಯೊಂದು ವಿಷಯದಲ್ಲಿ ಸಮಗ್ರವಾದ ಅಧ್ಯಯನ ಮಾಡಿದ್ದಾರೆ. ಜೊತೆಗೆ ಅದಕ್ಕೆ ಹೊಸ ಚಿಂತನಾ ಕ್ರಮ ನೀಡಿದ್ದಾರೆ. ಮನುಷ್ಯ ಕುಲಕ್ಕೆ ಹೊಸದೊಂದು ವೈಚಾರಿಕ ಚಿಂತನ ಮಾರ್ಗ ತೊರಿದವರು. ಭಾರತದ ಇತಿಹಾಸದಲ್ಲಿ ದಿನ ದಲಿತರ, ಸಾಮಾಜಿಕ ಬಹಿಸ್ಕೃತ, ಅಸ್ಪೃಶ್ಯರು, ದಲಿತರು, ಹಿಂದುಳಿದ ಅಲ್ಪಸಂಖ್ಯಾತರಲ್ಲದೇ ಹೀಗೆ ಅನೇಕ ಶೋಷಿತ ಸಮುದಾಯಕ್ಕೂ ಸಾಮಾಜಿಕ ನ್ಯಾಯವನ್ನು ನೀಡಿದ್ದಾರೆ. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ತಮ್ಮ ಬದುಕಿನುದ್ದಕ್ಕೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಡಾ.ಅಂಬೇಡ್ಕರ್ ಅವರು ಬುದ್ಧನ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇಡೀ ಮಾನವೀಯತೆಯ ಮೌಲ್ಯಗಳನ್ನು, ನೈತಿಕತೆಯ ವಿಚಾರಗಳನ್ನು ತಮ್ಮ ಬರಹದಲ್ಲಿ ವ್ಯಕ್ತಪಡಿಸಿಕೊಂಡಿದ್ದಾರೆ. ಈಗಾಗಲೆ ಡಾ.ಅಂಬೇಡ್ಕರ್ ಕುರಿತು ವಿಷಯಗಳು ಎಲ್ಲಾ ವಿಭಾಗಗಳಲ್ಲಿ ಅಧ್ಯಯನವಾಗಿವೆ. ಅವರ ಕುರಿತಾಗಿ ಕನ್ನಡದ ಬಹುಪಾಲು ಲೇಖಕರು ನಾಟಕ ರಚಿಸಿದ್ದಾರೆ. ಅವರ ವಿಚಾರಗಳ ಹಿನ್ನೆಲೆಯಲ್ಲಿ ರಚನೆಗೊಂಡ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್' ಎಂಬ ವಿಷಯದ ಮೇಲೆ ಸಂಶೋಧನ ಅಧ್ಯಯನ ಮಾಡುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಡಾ.ಅಂಬೇಡ್ಕರ್ ಅವರ ಜೀವನ ಚರಿತ್ರೆ, ಮತ್ತು ಹೋರಾಟದ ಭಾಗಗಳ ಕುರಿತು ಸಂಶೋಧನೆ ಹೆಚ್ಚಾಗಿ ನಡೆದಿರುವುದು ಕಾಣುತ್ತೇವೆ. ಅವರು ಬೇರೆ ಬೇರೆ ಕ್ಷೇತ್ರಕ್ಕೂ ನೀಡಿದ ಕೊಡುಗೆಯು ಅನನ್ಯವಾಗಿದೆ. ಅದಕ್ಕಾಗಿ ಕನ್ನಡ ನಾಟಕಗಗಳಲ್ಲಿ ಡಾ.ಅಂಬೇಡ್ಕರ್ ಅವರ ದೂರದೃಷ್ಟಿಯ ಮನೋಭಾವ ಬಳಕೆಯಾದ ಅಪೂರ್ವ ಚಿಂತನೆಯನ್ನು ಇಲ್ಲಿ ದಾಖಲಿಸಿಸುವ ಉದ್ದೇಶ ಹೊಂದಲಾಗಿದೆ. ಪುರುಷ ಪ್ರಧಾನ ಸಂಸ್ಕೃತಿ ವರ್ಣಾಶ್ರಮ ಪದ್ಧತಿಯ ಮಧ್ಯದಲ್ಲಿ ನಮ್ಮ ಲೇಖಕರು ಡಾ. ಅಂಬೇಡ್ಕರ್ ಅವರನ್ನು ಅರ್ಥೈಸಿಕೊಂಡ ಬಗೆಯನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸಿದ್ದಾರೆ. ನಾಟಕ ಸಾಹಿತ್ಯ ಕೇವಲ ಓದಿಗೆ ಸೀಮಿತವಲ್ಲ. ಅದನ್ನು ನೋಡುವ, ಕೇಳುವ, ಬರೆಯುವ ಮೂರಕ್ಕೆ ಮೂರು ಏಕಕಾಲಕ್ಕೆ ನಡೆಯುತ್ತವೆ. ಈ ಕಾರಣದಿಂದ ನಾಟಕ ಸಾಹಿತ್ಯ ಗಮನ ಸೆಳೆಯುವ ಪ್ರಮುಖ ಪ್ರಕಾರವಾಗಿದೆ. ಡಾ. ಅಂಬೇಡ್ಕರ್ ಅವರ ಕುರಿತಾದ ಸಾಹಿತ್ಯದ ಅನೇಕ ಪ್ರಕಾರಗಳಿಗಿಂತ ನಾಟಕ ಸಾಹಿತ್ಯವು ಭಿನ್ನವಾಗಿದೆ. ಹೀಗಾಗಿ ನಾಟಕ ಸಾಹಿತ್ಯದಲ್ಲಿ ಅಂಬೇಡ್ಕರ್ ಕುರಿತಾಗಿ ಬಂದಿರುವಂತಹ ನಾಟಕಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಸೀಮಿತ ಅವಧಿಗೆ ನಿಗದಿಪಡಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ.

ಆಧುನಿಕ ಕನ್ನಡ ನಾಟಕಗಳಲ್ಲಿ ಡಾ. ಬಿ.ಆರ್.ಅಂಬೇಡ್ಕರ್'' ಅವರ ಚಿಂತನೆಗಳನ್ನು ವಿಷಯವನ್ನು ಗಮನದಲ್ಲಿರಿಸಿಕೊಂಡು ಡಾ. ಅಂಬೇಡ್ಕರ್ ರವರ ಕುರಿತು ಬಂದ ನಾಟಕಗಳನ್ನು ಅವರ ಜೀವನ ಶೈಲಿ ಮತ್ತು ಅವರ ನಡೆದು ಬಂದ ದಾರಿ ಇಲ್ಲಿಯ ಜನರ ಉಸಿರಾಗಿದೆ. ಭಾರತ ದೇಶದಲ್ಲಿ ಮತ್ತು ಈ ನಾಡಿನಲ್ಲಿ ಜೀವಿಸಿ ತಮ್ಮದೆಯಾದ ಕೊಡುಗೆ ನೀಡಿದ್ದಾರೆ. ಈ ಕರ್ನಾಟಕದ ಕವಿ, ಕಲಾವಿದರು, ಸಾಹಿತಿಗಳು ಡಾ. ಬಿ.ಆರ್.ಅಂಬೇಡ್ಕರ್.ರವರ ಕುರಿತು ನಾಟಕ, ಚಲನಚಿತ್ರ ರಚಿಸಿದ್ದಾರೆ. ಕರ್ನಾಟಕದಲ್ಲಿ ಕರ್ನಾಟಕ ಜನ ಡಾ. ಅಂಬೇಡ್ಕರ ಅವರ ತತ್ವ, ವಿಚಾರವನ್ನು ಬೋಧಿಸಿಕೊಂಡು ಬರುತ್ತಾಯಿದ್ದಾರೆ.

ವಿವಿಧ ಕವಿಗಳು, ಕಲಾವಿದರು,ಚಿಂತಕರು, ತತ್ವ ವಿಮರ್ಶಕರು, ಜ್ಞಾನಿಗಳು ಸಾಹಿತ್ಯಿಕವಾಗಿ ಸಿಗುವ ನಾಟಕಗಳು, ಗ್ರಂಥಗಳು, ಕವಿ, ಕಾವ್ಯ, ವಿಚಾರಗಳು, ಜಾನಪದೀಯ ನೆಲೆಯಲ್ಲಿಯೂ ದೊರೆಯುವುದರಿಂದ ಈ ಭಾಗದ ಅಧ್ಯಯನದ ಅವಶ್ಯಕತೆ ಅದ್ದು ತೋರುತ್ತದೆ.

ಒಂದು ವಿಷಯದ ಕುರಿತು ಸಂಶೋಧನೆ ಮಾಡುವಾಗ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳುವುದು ತುಂಬ ಅವಶ್ಯಕವಾಗಿದೆ. ಸಂಶೋಧನೆಂಬುದು ಒಂದು ನೆಲೆಯಲ್ಲಿ ನಡೆಯುವಂತಹದಲ್ಲ. ಅದು ಕ್ಷೇತ್ರಧಾರಿತ, ಗ್ರಂಥಧಾರಿತ, ವ್ಯಕ್ತಿಯಾಧಾರಿತ, ವಸ್ತುಧಾರಿತ ಹಾಗೂ ಶಾಸನ ಆಧಾರಿತ ಹೀಗೆ ಹತ್ತು ಹಲವಾರು ವಿಧದಲ್ಲಿ ವಿಭಾಗಿಸಿಕೊಂಡು ಅಧ್ಯಯನ ಕೈಗೊಳ್ಳಲಾಗುತ್ತದೆ. ಪ್ರಸ್ತುತ ಸಂಶೋಧನಾ ಅಧ್ಯಯನವು ಒಬ್ಬ ಮಹಾನ್ ವ್ಯಕ್ತಿಯ ಕುರಿತಾಗಿದ್ದರಿಂದ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಎಂಬ ವಿಷಯದ ಮೇಲೆ ಸಂಶೋಧನೆ ಮಾಡುವುದರಿಂದ ಅವರ ಕುರಿತಾದ ನಾಟಕದಲ್ಲಿ ಅವರ ಪಾತ್ರ ಮತ್ತು ಜೀವನವನ್ನು ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆಯಾಗಿದೆ. ಜನರಿಗೆ ನಾಟಕ ಮುಖಾಂತರ ಹೇಗೆ ಅರಿವು ಮತ್ತು ಜಾಗೃತಿ ಮೂಡಿಸಿದ್ದಾರೆ ಎಂಬುದು ಕಂಡು ಬರುತ್ತದೆ. ಆಧುನಿಕ ಕನ್ನಡ ನಾಟಕಗಳ ಡಾ. ಬಿ. ಆರ್. ಅಂಬೇಡ್ಕರ್ ಎಂಬ ವಿಷಯವನ್ನು ಆರಿಸಿಕೊಂಡು ಸಂಶೋಧನಾ ವಿಧಾನವನ್ನು ನಾಟಕ ಮುಖಾಂತರ ವಿಷಯ ಸಂಗ್ರಹಣೆ ಜೊತೆಗೆ ವಸ್ತು, ವಿಷಯ ಇತರ ಆಕರಗಳನ್ನು ಉಪಯೋಗಿಸಿಕೊಂಡು ಸಂಶೋಧನೆಯನ್ನು ಮಾಡಲಾಗುವುದು.

ಸಂಶೋಧನೆಯ ಪ್ರಮುಖ ಹಂತಗಳಲ್ಲಿ ಮಾಹಿತಿ ಮತ್ತು ಆಕರ ಸಾಮಗ್ರಿ ಸಂಗ್ರಹಣೆ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕುರಿತಂತೆ ಅಧ್ಯಯನ ಕೈಗೊಳ್ಳಲು ಮುಖ್ಯವಾದ ಮಾಹಿತಿಯನ್ನು ನೇರವಾಗಿ ಕೃತಿಕಾರರನ್ನು ಸಂದರ್ಶನ ಮಾಡುವ ಮೂಲಕ ಮತ್ತು ಪ್ರಶ್ನಾವಳಿ ಮಾಹಿತಿ ಪಡೆದುಕೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದು. ನಾಟಕಕಾರರು ರಚಿಸಿದ ನಾಟಕಗಳನ್ನು ನೋಡಿ ಮತ್ತು ನಾಟಕ ನಾಟಕಕಾರರಲ್ಲಿನ ಇತರ ಮಾಹಿತಿಯನ್ನು ಸಂಗ್ರಹಣೆ ಮಾಡುವುದು. ನಾಟಕ ನೊಡುವುದರ ಮೂಲಕ ಅನುಭಾವದ ಮಾಹಿತಿಯ ಜೊತೆಗೆ ಸಹೃದಯರು ನೀಡಿದ ಮಾಹಿತಿ ಇಲ್ಲಿ ಸಿಗುತ್ತವೆ. ನಾಟಕಕಾರರ ಭಾವಚಿತ್ರಗಳು ನಾಟಕಕಾರರ ಕೃತಿಗಳು ಮತ್ತು ಸಾಹಿತಿಗಳ ಆಕರ ಗ್ರಂಥಗಳ ಆಕರ ಸಾಮಾಗ್ರಿಗಳಾಗಿ ಬಳಸಿಕೊಳ್ಳಲಾಗುವುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಮೂಲ ಆಕರ ಮತ್ತು ಅನುಷಂಗಿಕ ಆಕರ ಸಾಮಗ್ರಿಗಳು ನೆಲೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

ಪ್ರಸ್ತುತವಾಗಿ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಎಂಬ ವಿಷಯ ಕುರಿತು ಸಂಶೋಧನೆ ಕೈಗೊಂಡಿರುವುದು ಸಮಕಾಲಿನ ಜಗತ್ತಿನ ಅಗತ್ಯ ಹಾಗೂ ಚಾರಿತ್ರಿಕ ಅನಿವಾರ್ಯತೆಗಳಲ್ಲಿ ಒಂದಾಗಿದೆ. ಇಂದಿನ ನಾಟಕಗಳಲ್ಲಿ ಸನಾತನ ಸಂಸ್ಕೃತಿ ಹೇರಿದ್ದ ಎಲ್ಲಾ ಮಾನದಂಡಗಳಿಂದ ಮುಕ್ತವಾಗಿ ಸ್ವತಂತ್ರ ಅಭಿವ್ಯಕ್ತಿಯ ಮೂಲಕ ನಾಟಕಗಗಳು ರಚನೆಗೊಳ್ಳುತ್ತಿವೆ. ಈ ನಿಟ್ಟಿನಲ್ಲಿ ನಾಟಕಗಳು ವಿಶಾಲವಾದ ಬಾಲಕ ಅಂಬೇಡ್ಕರ್, ಪೂನಾ ಒಂಪ್ಪದ, ಸ್ವಾಭಿಮಾನಿ ಅಂಬೇಡ್ಕರ್, ರಮಾಬಾಯಿ ಅಂಬೇಡ್ಕರ್, ಇಂಗಳೆಮಾರ್ಗ, ನೀರು ಬೇಕು ನೀರು ಹೀಗೆ ಹಲವಾರು ರೀತಿಯಿಂದ ಒಬ್ಬ ರಾಷ್ಟ್ರ ನಾಯಕನ ವ್ಯಕ್ತಿ ಪರಿಚಯವನ್ನು ನಾನಾ ರೀತಿಯಿಂದ ನಾಟಕ ಮಾಡಿ ಪ್ರದರ್ಶಿಸಿದ್ದಾರೆ. ನಾಟಕಕಾರರು ನಾಟಕವನ್ನು ಇಡೀ ಕರ್ನಾಟಕಕ್ಕೆ, ಕನ್ನಡ ನೆಲಕ್ಕೆ, ಕನ್ನಡ ಜನತೆಗೆ, ಅಲ್ಲದೆ ಭಾಷಿಗರು ಕೂಡ ನಾಟಕಗಳನ್ನು ನೋಡುವುದರ ಮುಖಾಂತರ ಜನರಿಗೆ ಡಾ. ಬಿ. ಆರ್ ಅಂಬೇಡ್ಕರ್ ಅವರು ಯಾವ ರೀತಿ ಭಾರತ ದೇಶಕ್ಕೆ ಕೊಡುಗೆ ಕೊಟ್ಟಿದ್ದಾರೆ ಎಂಬುದನ್ನು ಕನ್ನಡ

ನಾಟಕಗಳಲ್ಲಿ ನಾಟಕಕಾರರು ನಾಟಕೀಯವಾಗಿ ಚಿತ್ರಿಸಿ, ರಂಗ ಪ್ರದರ್ಶನಕ್ಕಿಳಿಸಿದ್ದಾರೆ. ಇನ್ನು ಇವರ ಕುರಿತಾದ ಕೆಲ ಕತೆಗಳು, ಕಾದಂಬರಿಗಳು ಚಲನಚಿತ್ರಗಳಾಗಿವೆ.

ಇಡಿ ಸಮಾಜವನ್ನು ಬದಲಿಸುವಂತಹ ಶಕ್ತಿ ಅವರಲ್ಲಿತ್ತು ಎಂದು ಈ ನಾಟಕಾರರು ಜನಸಾಮಾನ್ಯರಿಗೆ ತೋರಿಸಿದ್ದಾರೆ. ಜಾತಿ, ವರ್ಗ, ವರ್ಣ, ಧರ್ಮಗಳ ಬಗೆಗೆ ಸಿಡಿದೆದ್ದು, ತಮ್ಮ ಹರಿತವಾದ ಲೇಖನಿ ಮೂಲಕ, ಕಾನೂನಿನ ಮೂಲಕ ಡಾ. ಅಂಬೇಡ್ಕರ್ ಈ ದೇಶದಲ್ಲಿ ಎಲ್ಲ ವರ್ಗದ ಜನರಿಗೆ ಸಮಾನತೆಯನ್ನು ಕಲ್ಪಿಸಿದರು. ಮುಂದೆ ಬರುವ ಪೀಳಿಗೆಗೆ ಡಾ. ಬಿ. ಆರ್ ಅಂಬೇಡ್ಕರ್ ಅವರು ಮಾಡಿದ ವೈಜ್ಞಾನಿಕ, ಚಲನಶೀಲ ಕಾರ್ಯಗಳು ಜನರಿಗೆ ತಿಳಸಬೇಕೆಂಬ ಹಂಬಲದಿಂದ ನಾಟಕಕಾರರು ನಾಟಕ ರಚನೆ ಮಾಡಿ ತೆರೆಯ ಮೇಲೆ ತಂದು ಜನರಿಗೆ ತೋರಿಸುತ್ತಿದ್ದಾರೆ. ಹಾಗೂ ಕೃತಿಯ ಮೂಲಕ, ಅಭಿನಯ ಮೂಲಕ, ಜನರಿಗೆ ಅರಿವು ಮೂಡಿಸಿದರು. ಆಧುನಿಕ ಕನ್ನಡ ನಾಟಕಗಳಲ್ಲಿ ಅನಕ್ಷರಸ್ಥ ಕನ್ನಡ ಜನತೆಗೆ, ಜಾಗೃತಿ ಅರಿವು ಮೂಡಿಸಿದರು.

ಈ ಮೇಲಿನ ಎಲ್ಲಾ ಕಾರಣಗಳಿಂದ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ. ಆರ್. ಅಂಬೇಡ್ಕರ್ ಎಂಬ ವಿಷಯದ ಮೇಲೆ ಅಧ್ಯಯನ ಮಾಡುವುದು ತುಂಬಾ ಅವಶ್ಯಕವೆನಿಸುತ್ತ

ಯಾವುದೆ ಒಂದು ಸಂಶೋಧನೆಯಿಂದ ಸಂಶೋಧಕನಿಗಲ್ಲದೆ ಇತರರಿಗೂ ಆಗುವ ಪ್ರಯೋಜನವನ್ನು ಅಲ್ಲಗಳೆಯುವಂತಿಲ್ಲ ಪ್ರತಿಯೊಂದು ಉತ್ತಮ ಸಂಶೋಧನೆಯಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಪಾರವಾದದ್ದು ಆದ್ದರಿಂದ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಎಂಬ ವಿಷಯ ಕುರಿತು ಸಂಶೋಧನ ಮಾಡುವುದು ಅತ್ಯಂತ ಪ್ರಯೋಜನಾ ಕಾರಿಯಾಗಿದೆ. ಆ ಕಾರಣಕ್ಕಾಗಿಯೇ ಡಾ.ಬಿ.ಆರ್.ಅಂಬೇಡ್ಕರ್ ಕುರಿತಾದ ನಾಟಕ ಮತ್ತು ಅವರ ಚಲನಚಿತ್ರದಿಂದ ಡಾ.ಅಂಬೇಡ್ಕರ್ ಅವರ ಜೀವನ ಚರಿತ್ರೆ ಮತ್ತು ಕೊನೆಯ ದಿನಗಳವರೆಗಿನ ಹೋರಾಟ ಚಿಂತನೆ ನಾಟಕಕಾರರು ನಾಟಕ ರೂಪದಲ್ಲಿ ಚಿತ್ರಿಸಿದ್ದಾರೆ. ಈ ಎಲ್ಲಾ ಪ್ರಕಾರದ ವೈವಿಧ್ಯತೆಯನ್ನು ಹೇಳುವ ಮೂಲಕ ಹೊಸ ನೆಲೆಯ ಸಂಶೋಧನಾತ್ಮಕ ಸಂಗತಿಯನ್ನು ಹೊರ ಹಾಕಬೇಕಾಗಿದೆ. ಆ ದೆಸೆಯಲ್ಲಿ ನಾಟಕಕಾರರ ಭಾವಚಿತ್ರ, ದೊರೆತ ನಾಟಕಗಳ ಸಾರಾಂಶ, ವ್ಯಕ್ತಿಚಿತ್ರಣ ಮುಂತಾದವುಗಳನ್ನು ಒಂದೇ ಕಡೆ ಸಂಗ್ರಹಣೆ ಮಾಡಲಾಗುವುದು. ಈ ಸಂಶೋಧನೆಯಿಂದ ಮುಂದಿನ ಪೀಳಿಗೆಗೆ ಹಾಗೂ ಸಾಹಿತ್ಯ ಆಸಕ್ತ ಸಹೃದಯರಿಗೆ ಡಾ.ಅಂಬೇಡ್ಕರ್‌ರ, ಜೀವನ, ಸಿದ್ಧಾಂತ, ಆದರ್ಶ–ತತ್ವಗಳು, ವಿಚಾರ ಮತ್ತು ಚಿಂತನೆಗಳು ಮತ್ತು ಅವರು ರಾಷ್ಟ್ರಕ್ಕೆ ನೀಡಿದ ಕೊಡುಗೆ ಹೀಗೆ ಹಲವಾರು ವಿಚಾರಗಳನ್ನು ತಿಳಿದುಕೊಳ್ಳಲು ಉತ್ಸುಕರಾದವರಿಗೆ, ಜನಸಾಮಾನ್ಯರಿಗೂ ಈ ಸಂಶೋಧನೆಯಿಂದ ತುಂಬ ಅನುಕೂಲವಾಗುತ್ತದೆ ಎಂದು ಹೇಳಬಹುದು.

ಪ್ರಸ್ತುತ ಸಂಶೋಧನಾ ವಿಷಯವು ‘‘ಆಧುನಿಕ ಕನ್ನಡ ನಾಟಕಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್’’ಆಗಿರುವುದರಿಂದ ಇಡೀ ಕರ್ನಾಟಕ ಭಾಗದಲ್ಲಿ ಬರುವ ಡಾ. ಅಂಬೇಡ್ಕರ್ ರವರ ನಾಟಕಗಳು ಈ ಸಂಶೋಧನಾ ವ್ಯಾಪ್ತಿಯಲ್ಲಿ ಬರುತ್ತದೆ. ‘‘ಆಧುನಿಕ ಕನ್ನಡ ನಾಟಕಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್’’ ನನ್ನ ಅಧ್ಯಯನಕ್ಕೆ ಒಳಪಡುತ್ತವೆ. ಹೀಗೆ ಈ ಭಾಗದ ನಾಟಕಗಳು ಅಧ್ಯಯನಕೊಳಪಡಿಸಿ ಸಂಶೋಧನಾ ಅಧ್ಯಯನವು ಪರಿಣಾಮಕಾರಿಯಾಗಿ ಒಡಮೂಡವಂತೆ ಪ್ರಯತ್ನಿಸಲಾಗುವುದು.

ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಮಾಹಿತಿಯನ್ನು ಕಲೆಹಾಕಿದಾಗ ಆಕರ ಸಾಮಾಗ್ರಿಗಳನ್ನು ಸಂಗ್ರಹಣೆ ಮಾಡುವಾಗ ಕರ್ನಾಟಕದಲ್ಲಿ ಕನ್ನಡದಲ್ಲಿ ಡಾ.ಅಂಬೇಡ್ಕರ್ ಅವರ ಕುರಿತಾದ ನಾಟಕಗಳು ಎಷ್ಟು ಬಂದಿವೆ, ಮತ್ತು ಕನ್ನಡದಲ್ಲಿ ಚಲನಚಿತ್ರ ಎಷ್ಟು ಬಂದಿವೆ, ಎಂಬುದು ನಾಟಕಕಾರರ ಪ್ರತಿಭೆ ಎಂತಹದು ಎಂದು ಹೇಳಬಹುದು. ಯಾವ ರೀತಿ ನಾಟಕ ಚಿತ್ರಿಸಿದ್ದಾರೆ, ನಾಟಕಕಾರರು ಹೇಗೆ ಡಾ.ಅಂಬೇಡ್ಕರ್ ಜೀವನ ಚಿತ್ರಣವನ್ನು ಕನ್ನಡ ನಾಡಿಗೆ ನಾಟಕ ಮುಖಾಂತರ ಹೇಗೆ ಗುರುತಿಸಿದ್ದಾರೆಂದು ನಾವು ನೋಡಬಹುದು. ಅದಕ್ಕಗೋಸ್ಕರ ರಾಷ್ಟ್ರ ನಾಯಕ ಸಂವಿಧಾನ ಶಿಲ್ಪಿ, ಆಧುನಿಕ ಸಮಾಜ ಸುಧಾರಕ ಅಕ್ಷರಸ್ಥರಿಗೆ ಅಲ್ಲದೆ, ರಾಷ್ಟ್ರದ ಅನಕ್ಷಸ್ಥರಿಗೂ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೇಕೆ ಬೇಕು ಎಂದು ನಾಟಕಾರರು ನಾಟಕ ರಚನೆ ಮಾಡಿದ್ದಾರೆ. ಇಡೀ ಕನ್ನಡ ನಾಡಿಗೆ ಡಾ. ಬಿ.ಆರ್.ಅಂಬೇಡ್ಕರ್‌ರನ್ನು ನಾಟಕಗಳ ಮುಖಾಂತರ ಮನಮಿಡಿಯುವಂತೆ ನಾಟಕೀಯವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

ಒಟ್ಟಾರೆಯಾಗಿ ಆಧುನಿಕ ಕನ್ನಡ ನಾಟಕಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಎಂಬ ವಿಷಯದ ಮೇಲೆ ಅಧ್ಯಯನ ಮಾಡುವುದು ಅತ್ಯಂತ ಮಹತ್ವದಾಗಿದೆ ಎಂಬ ಕಾರಣಕ್ಕಾಗಿ ಈ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ.